# ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ

## ಸಿಡ್ಲೆಹಳ್ಳಿ ಮತ್ತು ತಾರಿಣಿಯ ಪ್ರಾರ್ಥನೆ

೧

ಬೆಂಗಳೂರಿನಿಂದ ದೂರ ದೂರ ದೂರ

ಎರಡು ನೂರು ದೂರ

ಶಿವಮೊಗ್ಗೆಗೆ ಧಾವಿಸಿತ್ತು ಕವಿಯ ಕಾರು

ಕಾಲದೇಶ ಲಗ್ಗೆಗೆ ಕ್ಷಣಕ್ಷಣಕ್ಷಣಕೆ ಮೈಲಿ ಮೈಲಿ ಮೈಲಿ

ಹಾರುತ್ತಿತ್ತು ಕವಿಯ ಕಾರು:

ತೇಲುತ್ತಿತ್ತು ಚಿಮ್ಮುತಿತ್ತು ಈಜುತಿತ್ತು ಮಿಂಚುತಿತ್ತು

ಸಿಮೆಂಟು, ಟಾರು!

ಉಬ್ಬು ತಗ್ಗು ನೇರ ಡೊಂಖು

ಕರಿಯ ರಸ್ತೆ ಹಾವು ಹರಿಯುತಿತ್ತು

ಸರ್ಪಿಸಿ!

ದೂರದೊಂದು ಭವಿಷ್ಯದಂತೆ

ಕಂಡ ಆ ದಿಗಂತವೊಡನೆ

ವರ್ತಮಾನವಾಗಿ ಕಾರಿನಡಿಯೆ ತೂರಿ

ಭೂತಕಾಲವಾಗಿ ಸ್ಮರಣಮಾತ್ರವಾದ ತೆರೆದಲಿ

ವೇಗ ವೇಗ ವೇಗ ಭರದಲಿ

ತನ್ನ ತಾ ಸಮರ್ಪಿಸಿ

ಧಾವಿಸಿತ್ತು ಕವಿಯ ಕಾರು!

೨

ಕವಿ: ವೈಸ್ ಛಾನ್ಸಲರ್!

ಕಾರ್: ಸ್ಟುಡಿಬೇಕರ್!

ಸದ್ಯದ ಡ್ರೈವರ್: ಪೂರ್ಣಚಂದ್ರ ತೇಜಸ್ವಿ!

ಅವನ ಪಕ್ಕ ನಿಜ ಡ್ರೈವರ್!

ಜವದ ಹುಚ್ಚೆ ಹಿಡಿಯಿತೇನೊ ಪೆಟ್ರೋಲಿಗೆ!

ಅತ್ತ ಇತ್ತ ಕಾರ್ತಿಕದ

ನೆಲದ ಸಿರಿ ಹಸುರಿಸೆ

ನೀಲಿ ಬಾನು, ಮುಗಿಲ ಲೀಲೆ,

ನೆತ್ತಿ ಮೇಲೆ ಹಸರಿಸೆ....

ಅಯ್ಯೋ

ಇತ್ತ ನೋಡು.... ದೇವರೆ ಗತಿ,

ಅರುವತ್ತು! ಎಪ್ಪತ್ತು! ಎಪ್ಪತ್ತೈದು!....

ಗೂಳಿಗಣ್ಣ ಸ್ಪೀಡಾಮಿಟರ್ ಕೂಗಿ ಹೇಳುತಿತ್ತು.

೩

"ಬೇಡ ಕಣೋ ಇಷ್ಟು ಸ್ಪೀಡು!"

"ಬಿಡಿ, ಅಣ್ಣಾ, ಸುಮ್ಮನಿರಿ,

ನನಗೆ ಗೊತ್ತಿದೆ!"

ಎಂದಿನಂತೆ ತೇಜಸ್ವಿಯ ಉಡಾಫಿ ಉತ್ತರ!

ಸರಿ, ಕಣ್ಣು ಮುಚ್ಚಿ ಕುಳಿತೆ:

ದಕ್ಷಿಣೇಶ್ವರ! ಭವತಾರಿಣಿ!

ಜಗದಂಬೆಗೆ ಚವರಿ ಬೀಸುತಿಹರು ಪರಮಹಂಸರು!

ಕೈಯ ಮುಗಿದು ನಿಂತು ನೋಡಿ ಧನ್ಯನಾಗುತ್ತಿದ್ದೆ.

ಚಕ್ರವೇಕೊ ಕೀರೆಂದಿತು:

ಒಳ್ಳೆರಸ್ತೆ, ನೇರ ರಸ್ತೆ,

ಆದರೇನು? ಗಾಲಿ ವಾಲಿ ಸದ್ದು ಮಾಡತೊದಗಿದೆ!

"ಸ್ಟೀರಿಂಗೇಕೊ ಸರಿ ಇಲ್ಲ; ಸ್ವಲ್ಪ ಎಣ್ಣೆ ಬಿಡಬೇಕಿತ್ತೊ?"

"ನಿನ್ನೆ ಅಲ್ಲ ಮೊನ್ನೆ ತಾನೆ ಲೂಬ್ರಿಕೇಷನ್ ಆಗಿದೆ"

ಎಂದ ಡ್ರೈವರ್, ಡ್ರೈವ್ ಮಾಡುತ್ತಿದ್ದ ತೇಜಸ್ವಿಗೆ.

"ಚಕ್ರವೇಕೊ ಎಡದ ಕಡೆಗೆ ವಾಲುತ್ತಿದೆ!"

ಗಾಡಿ ನಿಂತಿತು. ಪರೀಕ್ಷೆ ಸಾಗಿತು:

ಜಾಕ್ ಹೊರಗೆ ಬಂದಿತು.

ಗಾಡಿ ಮೇಲಕೆದ್ದಿತು.

ಚಕ್ರ ಬಿಚ್ಚಿದರು.

ಸ್ಪ್ಯಾನರ್-ಸ್ಕ್ರೂ ಡ್ರೈವರ್- ವೀಲ್ ಸ್ಪ್ಯಾನರ್-ಟಕ್ ಟಕ್

ಟಕ್….

ಅರ್ಧ ಗಂಟೆ ಮುಗಿದ ಮೇಲೆ ಮತ್ತೆ….

ಹೊರಟಿತು!

೪

ಚಕ್ರ ಮತ್ತೆ ಸಮೆಯುತ್ತಿತ್ತು: ಕಿರೋ ಕಿರೋ ಕಿರೋ!

ಫಿಷ್ ಪ್ಲೇಟ್…. ಟೈರ್ ರಾಡ್ ಎಂಡ್ ….

ಮಣ್ಣು ಮಸಣ … ನನಗೆ ಅರ್ಥವಾತದಿದ್ದ ನೂರು ಹೆಸರು….

ಕಡೆಗೆ ಮತ್ತೆ ಗಾಡಿ ನಿಂತಿತು:

ಸರಿ, ಮತ್ತೆ ಇಳಿದರಿಬ್ಬರೂ.

ನಾ….ನೂ….ಇಳಿದೆ!!

ಏನುಮಾಡುವುದು?

"ಚಕ್ರ ವಾಲಿ ಹೀಗೆ ಗಾಡಿ ನಡೆದರೆ

ಬಹಳ ಕೆಟ್ಟದು" ಎಂದ ತೇಜಸ್ವಿ.

"ಹೌದು ಅಣ್ಣ" ಎಂದು ಡ್ರೈವರ್ ಪಲ್ಲವಿ!

ಮತ್ತೆ ಜಾಕು ಕೊಟ್ಟು ಕಾರು ಎದ್ದಿತು.

ಡ್ರೈವರ್ ಕಾರಿನ ಹೊಟ್ಟೆ ಅಡಿ ಅಡಗಿದ.

ದಾರವಿಟ್ಟು ಆಳೆದರು: ಏಕೊ ಏನೊ?

ಅದರ ಬದಲು ಕುಂಕುಮ ಹಚ್ಚಿದರೂ

ಆಗುತಿತ್ತೇನೊ!

೫

ನನಗೆ ರೇಗಿತು:

"ಮೊನ್ನೆ ತಾನೆ ಲ್ಯೂಬ್ರಿಕೇಷನ್ ಮಾಡಿಸಿದೆ.

ಇಂದು ಕಾರು ದಾರಿಯಲ್ಲಿ ತೊಂದರೆ ಕೊಡುತ್ತಿದೆ.

ನಿನಗೆ ತಲೆ ನೆಟ್ಟಗಿದ್ದರೆ ಹೀಗಾಗುತಿತ್ತೆ?

ನೀನೊಬ್ಬ ಡ್ರೈವರ್…. ಕೆಲಸಕ್ಕೆ ಬಾರದವ….

ಬೆಪ್ಪು ಮುಂಡೇದು!….

ಹೀಗೆ ಸಹಸ್ರನಾಮ!…

ಇನ್ನೆಂದಿಗೂ ಈ ಡ್ರೈವರ್ ಈ ಕಾರು ನಂಬಿ
ದೂರ ಪಯಣಕ್ಕೆ ಹೊರಡುವುದಿಲ್ಲ.
ಇದೇ ಕೊಟ್ಟ ಕೊನೆ! ಇದೇ ಕೊಟ್ಟ ಕೊನೆ!"
ಹೀಗೆ ನನ್ನ ಸಿಟ್ಟು ಹರಿಯುತ್ತಿತ್ತು!
ಮತ್ತೆ ಹೇಳಿದೆ:
"ಹೊರಡಿ ಈಗ
ಹೇಗಾದರು ಅರಸಿಕೆರೆಯವರೆಗೆ ಹೋಗಿ
ವರ್ಕ್‌ಷಾಪಿನಲ್ಲಿ ತೋರಿಸಿ ಸರಿಪಡಿಸೋಣ!
ಆಗಲೆ ಎರಡು ಗಂಟೆ ಕಳೆದಿತ್ತು ರಿಪೇರಿಯಲ್ಲಿ!

೭

ಮತ್ತೆ ಕಾರು ಹೊರಟಿತು:
ಕಡಿಮೆ ವೇಗದಲ್ಲೆ ಹೊರಟಿತು!
ಮತ್ತೆ ಅದೇ ಸದ್ದು ! ಅದೇ ವಾಲಿಕೆ....
ಅದೇ ಹೊತ್ತಿನಲ್ಲಿ
ದೂರ ಮೈಸೂರಿನಲಿ, ಮನೆ 'ಉದಯರವಿ' ಯಲ್ಲಿ,
ಮಗಳು ತಾರಿಣಿ ಗುಡಿಸಿ, ದೇವರ ಮನೆಯ ತೊಳೆದು,
ಹೂ ಮುಡಿಸಿ, ಸೊಡರ ಹೊತ್ತಿಸಿ, ಊದುಕಡ್ಡಿಯಿಟ್ಟು
ಒಂದು ವಾರದ ವರೆಗೆ ದೂರ ಪಯಣಕೆ ಹೋದ
ತಂದೆಯನು ನೆನೆದು
"ಸುಗಮವಾಗಲಿ ದೇವ, ಅಣ್ಣನಿಗೆ ಪಯಣ!
ಕ್ಷೇಮವಾಗಿಯೆ ಅಣ್ಣ ತಿರುಗಿ ಬರಲಿ!"
ಎಂದು ಪ್ರಾರ್ಥನೆ ಮಾಡುತಿರೆ ಭಕ್ತಿ ತುಂಬಿ:
ಡ್ರೈವರನ ತಲೆಗೇನೊ ತಕ್ಕನೆಯೆ ಹೊಳೆದಂತಾಯ್ತು:
"ಟೈರ್ ರಾಡ್ ಎಂಡ್ ಅಲೈನ್ ಮೆಂಟ್ ನೋಡಬೇಕಿತ್ತಣ್ಣಾ...."
"ನಿನ ತಲೆ! ನಿನ್ನ ಬೆಪ್ಪು ತಕ್ಕಡಿತನ ಮುಚ್ಚುಕೊಳ್ಳೋಕೆ
ಬಾಯಿಗೆ ಬಂದದ್ದು ಬೊಗಳ್ತೀಯಾ!"
ಎಂದು ಸ್ವಲ್ಪ ದೂರ ಹೋಗಿ ಚಕ್ರ ಕೀರುವ ಸದ್ದಿಗೆ ಕಿನಿಸಿ ತೇಜಸ್ವಿ:
"ಇಲ್ಲ, ಅಣ್ಣಾ, ಕಾರು ಹಾಳಾಗುತ್ತದೆ

ಹೀಗೇ ನಾವು ಮುಂದುವರಿದರೆ.

ಟೈರ್ ರಾಡ್ ಎಂಡ್ ಅಲೈನ್ ಮೆಂಟ್ ನೋಡಿದರೆ

ಸರಿಹೋಗಬಹುದೇನೋ!"

ರಸ್ತೆ ಎಡಕೆ ಕಾರು ನಿಂತಿತು. ಕೆಳಗೆ ಇಳಿದೆವು ಮತ್ತೆ:

೭

ಗಡ್ಡ ಬಿಳಲಿದ ಹಸುರಿನ ದಟ್ಟ ಹೇರಾಲಗಳ ಹಂತಿ

ಸಾಲು ಸಾಲಾಗಿ ನಿಂತು ರಸ್ತೆಯಿಕ್ಕೆಲದಲ್ಲಿ

ನಮಗೆ ಗೌರವ ರಕ್ಷೆ ನೀಡಿದುವು.

ಕಾರ್ತಿಕದ ಹಿತ ಬಿಸಿಲು ಹಸುರು ಹೊಲಗಳ ಮೇಲೆ

ಹುಲುಸಾಗಿ ಹಸರಿಸಿತ್ತು.

ಹಣ್ಣು ತುಂಬಿದ ಆಲ ಹಕ್ಕಿಗಳನೌತಣಕೆ ಕರೆದಿತ್ತು:

ಲಕ್ಷ ಪಕ್ಷಿಯ ಕೊರಲು ಕಿವಿಗಿಂಪ ಸುರಿದಿತ್ತು.

ದಾರಿ ಬದಿ ಕಲ್ಲಬೋರ್ಡಿನೊಳಿತ್ತು ಬರೆಹ:

"ಸಿಡ್ಲಿಹಳ್ಳಿ!"

ಅಲ್ಲೆಲ್ಲಿಯೂ ಹಳ್ಳಿ ಕಣ್ಗೆ ಕಾಣಿಸಲಿಲ್ಲ.

ಹೆದ್ದಾರಿಯಿಂದ ಮೊದಲಾಗಿ ಹೊಲಗಳ ನಡುವೆ ಹಾದಿ

ಬೋರೆಯನಿಳಿದು ಕಣ್ಗೆ ಮರೆಯಾಗಿತ್ತು.

ಏಳೆಂಟು ವರುಷಗಳ ಹೈದನೊಬ್ಬನು ಕಾರು ನೋಡಲು ಬಂದು

ಹಳ್ಳಿಯ ಕುತೂಹಲವ ಪ್ರತಿನಿಧಿಸಿ ನಿಂತಿದ್ದನಲ್ಲಿ.

ಜಾಕ್-ಟೈರ್ ಲಿವರ್-ಸ್ಪಾನರ್ -ಚಕ್ರಕ್ಕೆ ಕಲ್ಲಾಪು.

ಟೈರ್ ರಾಡ್ ಎಂಡ್ ಅಲೈನ್ ಮೆಂಟ್ ನೋಡಲಿಕ್ಕೆ

ಕಾರಿನಡಿ ಹೊಟ್ಟೆ ಮೇಲಾಗಿ ಮಲಗಿದನು ಡ್ರೈವರ್.

"ಓ ಹೋ ಹೋ ಹೋ – ಅಣ್ಣಾ!"

"ಏನೋ?" ಕೇಳಿದನು ತೇಜಸ್ವಿ.

"ಟೈರ್ ರಾಡ್ ಎಂಡ್ ಅಲೈನ್ ಮೆಂಟ್ ಅಲ್ಲ….."

"ಮತ್ತೇನೋ?"

"ಫ್ರಂಟ್ ವೀಲ್ ಮೆಯ್ನ್ ಸ್ಪ್ರಿಂಗ್ ಸ್ಕ್ರೂ ಬಿದ್ದುಹೋಗಿದೆ!"

"ಛೆ ಛೆ ಛೆ! ಏನಪಾಯವಾಗುತ್ತಿತ್ತು!!…."

'ಉದಯರವಿ'ದೇವರ ಮನೆಯಲ್ಲಿ

ಪ್ರಾರ್ಥಿಸುತ್ತಿದ್ದ ತಾರಿಣಿಯ ಕೈ ಮುಗಿಯುತಿತ್ತು.

ಆಗಳಾಗಳೆ ಮುಗಿಯುತಿತ್ತು

ಪ್ರಾರ್ಥನೆಯೂ:

"ಸುಗಮವಾಗಲಿ, ದೇವ, ಅಣ್ಣನಿಗೆ ಪಯಣ!

ಕ್ಷೇಮವಾಗಿಯೆ ಅಣ್ಣ ಹೋಗಿಬರಲಿ!"

ನವೆಂಬರ್ ೨೬, ೧೯೫೬

(೧೮-೧೧-೧೯೫೬ ರಂದು ಶಿಮೊಗ್ಗೆಗೆ ಬೆಳಗ್ಗೆ ಕಾರಿನಲ್ಲಿ ಹೊರಟಿದ್ದೇವು. ಮಧ್ಯೆ ದಾರಿಯಲ್ಲಿ ನಡೆದ ಘಟನೆಯಿಂದ ಪ್ರೇರಿತವಾದದ್ದು.)

## ಅನ್ನರತ್ನಾಕರಗೆ*

ನೀ ಬರಿಯ ಹೆಸರಿಂದೆ ರತ್ನಾಕರನೆ? ಅಲ್ತು:
ತಾಯಿ ಭಾರತಿಗುದರ ನೈವೇದ್ಯಮಂ ನೀಡಿ ಹೊರೆಯುತಿಹ ಅನ್ನರತ್ನಾಕರನೆ ದಲ್! ದರ್ಶಿಸುತೆ
ನಿನ್ನ ಈ ಶಾಲಿ ಸಂಪನ್ ಮಹೀಲಕ್ಷ್ಮಿಯಂ
ಕೈಮುಗಿದೆ, ಮಣಿದೆ, ಬೆರಗಾದೆ! ನಿನ್ನಂತೆವೋಲ್
ಬೆಳೆವರಿದ್ದರೆ ಅಮ್ಮ ಭಾರತಿಗೆ ಇಂದಿರುತಿತ್ತೆ
ಅನ್ನ ಭಿಕ್ಷಾಟನೆಯ ಗೋಳ್? –
ಓಡುವನ್ನೆಗ ಚಕ್ಷು
ದಟ್ಟಯ್ಸಿ ಹಚ್ಚನೆಯ ಕಂಗೊಳಿಸುವೀ ಇಕ್ಷು
ನಾಡೆದೆಗೆ ಕೆಚ್ಚೀವ ಸಕ್ಕರೆಯ ಸಾಕ್ಷಿ! –
ಸಮರ ಸನ್ನದ್ಧ ಸೈನಿಕ ವೀರ ಭಂಗಿಯಿಂ
ಗೊನೆ ಹೊತ್ತು ನಿಂತಿರುವ ಈ ಕೌಂಗು ತರುಪಂಕ್ತಿಗಳ್
ಅರ್ಥ ರಕ್ಷೆಗೆ ದೀಕ್ಷೆವೆತ್ತಿವೆ, ಕವಾತಿನೊಲ್,
ಕೋವಿಹೆಗಲಾದಂತೆ ವಾಣಿಜ್ಯ ಸಾಮ್ರಾಜ್ಯದೊಂದು ದಂಡು:
ಒಂದೊಂದು ಅಡಕೆಯೂ ದಾರಿದ್ರ್ಯದೆದೆಗೆ ಗುರಿಯಿಟ್ಟ ಗುಂಡು!
ಚೀಣ ಪಾಕಿಸ್ತಾನಗಳಿಗೆ ಮಾರಾಂತ ಕಲಿ ಕೃಷಿಕ ಗಂಡು!
ಪತ್ರಿಕೆಗೆ ಹೆಸರೀಯೆ, ಹೆರರ ದುಡಿಮೆಯನುಂಡು,
ಬರಿದೆ ಭಾಷಣ ಬಿಗಿವ ರಾಜಕಾರಣಿ ಹಿಂಡು
ಯಾತ್ರೆ ಬಂದೀ ಕ್ಷೇತ್ರದರ್ಶನಕೆ ಕಲಿಯಲಿ ನಿನ್ನ ಕಂಡು!

---

* ೧೯೬೭ನೆಯ ಅಕ್ಟೋಬರ್ ೨೩ರಂದು ಸೋಮವಾರ ಶಿವಮೊಗ್ಗದಲ್ಲಿ ಶ್ರೀ ದೇ. ರಾ. ರತ್ನಾಕರ ಅವರ ಕೃಷಿಕ್ಷೇತ್ರಕ್ಕೆ ಸಂದರ್ಶನವಿತ್ತ ಸಂದರ್ಭದಲ್ಲಿ.

## ಶ್ರೀ ಬಸವೇಶ್ವರರಿಗೆ

ಕಾರ್ತಿಕದ ಕತ್ತಲಲಿ ಆಕಾಶದೀಪವಾಗಿ
ನೀ ಬಂದೆ,
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ
ಎಂಟು ಶತಮಾನಗಳ ಹಿಂದೆ,
ಅಗ್ನಿ ಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ,
ದೇವದಯೆಯೊಂದು ಹೇ ಧೀರಾವತಾರ,
ಶ್ರೀ ಬಸವೇಶ್ವರಾ!
ಜಾತಿಪದ್ಧತಿಯ ಹೋಮಕೂಪಕ್ಕೆ
ಬಿದ್ದು, ವೈದಿಕರ ಯಜ್ಞತಾಪಕ್ಕೆ
ಬಲಿಪೋದ ದಲಿತ ಜೀವರನೆತ್ತಿ ಮತಿವಿಚಾರಕ್ಕೆ
ಕಾಯಕದ ದಿವ್ಯ ತತ್ತ್ವದಾ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋನಮಃ!
ಇಂದಿಗೂ ನಾವು ನಿನ್ನೆತ್ತರಕೆ ಏಳಲಾರದೆ ಅಯ್ಯೋ
ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹೆವಯ್ಯ!
ಬಾರಯ್ಯ ಕೈಹಿಡಿದದತ್ತಿ ಬದುಕಿಸು ನಮ್ಮನೆಳೆದು
ವರ್ಣಾಶ್ರಮದ ಹೆಸರ ಹೊಲೆಗೆಸರ ವಂಚನೆಯ
ಹೊಂಡದಿಂದೆ!
ಭಕ್ತಿಗಂಗೆಯನೆರೆದು
ಭಾಗವತ ಶಕ್ತಿಯಂ ಕರೆದು
ಮತ ಮೌಢ್ಯದಜ್ಞಾನ ಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನ ವೇದಾಂತ ತೀರ್ಥದಿಂದೆ!
ಜನವರಿ, ೨೭ ೧೯೬೮

## “ಪಶುಗಳೊಡನೆ ಪಶುವಾಗಿಯಾದರೂ ಬದಕಲೇ?”

(ವಾಲ್ಟ್ ವಿಟ್‌ಮನ್ ಕವಿಯ ವಚನ ಕವನದ ಅನುವಾದ)

ಪಶುಗಳೊಡನೆ ಪಶುವಾಗಿಯಾದರೂ ಬದುಕಲೇ? ಅವಕ್ಕೆನಿತು ಶಾಂತಿ, ಎನಿತು ತೃಪ್ತಿ!
ನೋಡುತ್ತಾ ನಿಂತೆನೆಂದರೆ ಘಂಟೆಘಂಟೆ ಹರಿದರೂ ಹೊತ್ತು ಗೊತ್ತಾಗುವುದಿಲ್ಲ.
ತಮ್ಮ ಇರವಿಗೆ ಮರುಗಿ ಅವು ಕದಿಯುವುದಿಲ್ಲ, ಬಾಯಿ ಬಡಿದುಕೊಳ್ಳುವುದಿಲ್ಲ,
ಪರದಾಡುವುದಿಲ್ಲ.
ಇರುಳೆಲ್ಲಾ ನಿದ್ದೆಗೆಟ್ಟು ಪಾಪಗಳಿಗಾಗಿ ಪಶ್ಚಾತ್ತಾಪಪಡುವುದಿಲ್ಲ.
ದೇವರು ಧರ್ಮಗಳನ್ನು ಕುರಿತು ಜಿಜ್ಞಾಸೆ ಮಾಡುತ್ತಾ ನನಗೆ ರೇಜಿಗೆ ಹಿಡಿಸುವುದಿಲ್ಲ.
ಅವುಗಳಲ್ಲಿ ಯಾವೊಂದಕ್ಕೂ ಅತ್ಯಾಸೆಯಿಲ್ಲ, ಯಾವೊಂದೂ ವಸ್ತುಗಳಿಗೆ
ಒಡೆಯನಾಗಬೇಕೆಂದು ತಲೆಕೆಡಿಸಿಕೊಂಡಿಲ್ಲ.
ಒಂದಾದರೂ ಮತ್ತೊಂದಕ್ಕೆ ಮೊಣಕಾಲು ಮಣಿಯುವುದಿಲ್ಲ, ಕಾಲಿಗೆ ಬೀಳುವುದಿಲ್ಲ,
ಜೊತೆ ಇರುವವಕ್ಕಾಗಲಿ, ಶತಮಾನಗಳಿಗೆ ಹಿಂದೆ ಬದುಕಿದ್ದವುಗಳಿಗಾಗಲಿ.
ಯಾವೊಂದೂ ಶ್ರೀ ಶ್ರೀ ಶ್ರೀಯಾಗಿಲ್ಲ; ಹುಡುಕಿದರೂ ಮತ್ಸರದ ಅಸುಖ
ದೊರೆಯುವುದಿಲ್ಲ.
ಯಾವೊಂದೂ ಬಿರುದುವೊತ್ತು ಗೌರವಪದವಿಗೇರಿಲ್ಲ.

## ನೆರೆ*

೧

ಮಳೆಗಾಲ ಜರ್... ಎಂದು ಮಳೆ ಬೀಳುತಿತ್ತು
ಸುತ್ತಲೂ ಕತ್ತಲು ಕವಿದಿದ್ದಿತು;
ಗುಡುಗುಡುಗುಡುಗುಡು ಗುಡುಗಾಡುತಿತ್ತು
ಥಳಥಳ ಮಿಂಚು ಥಳಿಸಿದ್ದಿತು!
ಭೋರೆಂದು ಬಿರುಗಾಳಿ ಬೀಸುತಲಿತ್ತು
ಒಲೆಯೊಳು ತನಿಗೆಂಡ ಕಳಕಳಿಸಿತ್ತು.

೧

ಕೆಲಸವ ಪೂರೈಸಿ ಹೊಲದಿಂದ ಬಂದು
ಚಳಿ ಕಾಯಿಸುತ್ತ ಮಂಜಣ್ಣನು,
ಬೆಂಕಿಯ ಬಳಿಯಲ್ಲಿ ಕೂತಿದ್ದನಾಗ
ನಾವೆಲ್ಲರವನ ಮುತ್ತಿದ್ದೆವು;
ಕತೆಗಾರ ಮಂಜಣ್ಣ ಬಲುಮುದಿಯಾಳು,
ಆದರವನಾ ಬಾಳು ಕಗ್ಗಲ್ಲ ಬಾಳು!

೨

ಅಲ್ಲಿಯೆ ಹತ್ತಿರ ಕುಳಿತಿದ್ದ ಕಿಟ್ಟು
“ಮಂಜಣ್ಣ ಒಂದು ಕತೆ ಹೇಳೆಂ”ದನು:
ಕೇಳಿದನು ಬಹುದೂರ ಕುಳಿತಿದ್ದ ಪುಟ್ಟು
ಹತ್ತಿರ ಹತ್ತಿರಕ್ಕೈತಂದನು.
“ಕಟ್ಟಿದ ಕತೆ ಬೇಕೊ? ನಡೆದಿದ್ದೆ ಸಾಕೊ?
ಯಾವುದು ಎಲೆ ಕಟ್ಟು?” ಮಂಜಣ್ಣನೆಂದ.

೪

“ಕಟ್ಟಿದ ಕತೆಯೇಕೆ ನಡೆದಿದ್ದೆ ಹೇಳು”
ಎಂದೆವು ಒಟ್ಟಿಗೆ ನಾವೆಲ್ಲರೂ.
ಮಂಜಣ್ಣ ಕತೆ ಹೇಳಲಾರಂಭಮಾಡೆ
ಎಲ್ಲರು ಹತ್ತಿರಕ್ಕೈತಂದರು;
ಮಂಜಣ್ಣನೆಂದರೆ ನಮಗೆಲ್ಲ ಪ್ರಾಣ!
ಕತೆ ಹೇಳುವುದರಲ್ಲಿ ಅವನತಿಜಾಣ.

೫

“ಆಗಿನ್ನೂ ನಾ ಹುಡುಗ, ಕಿಟ್ಟುವಷ್ಟಿದ್ದೆ
ಎಪ್ಪತ್ತು ವರ್ಷದಾಚೆಯಲಿ;”
“ಆಮೇಲೆ? ಆಮೇಲೆ? ಆಮೇಲೆ? ಹೇಳು?”
ಎಂದೆವು ಒಟ್ಟಿಗೆ ನಾವೆಲ್ಲರೂ.
“ದೇವರು ಕಳುಹಿದನೆಂದೆಂಬರಣ್ಣ
ಪಾಪಕ್ಕೆ ಶಿಕ್ಷೆಯದೆಂದೆಂಬರಣ್ಣ!”

೬

“ದೇವರೊ ದೆವ್ವವೂ ಯಾರಾದರೇನಂತೆ?

ಬಲುಘೋರವಾಗಿದ್ದೀತಾ ತಾ ಮಳೆಯು!

ಹೊಳೆಬಂದು, ನೆರೆಯೇರಿ, ಊರೂರೆ ತೇಲಿ

ಮಕ್ಕಳ ಮರಿಗಳ ಬಲುನುಂಗಿತು”

“ಆಮೇಲೆ? ಆಮೇಲೆ? ಆಮೇಲೆ? ಮೇಲೆ?”

ಎಂದೆವು ಮತ್ತೆ ನಾವೆಲ್ಲರೂ ಕೇಳೆ.

೭

“ನಡುರಾತ್ರಿಯಾಗಿತ್ತು ಮಲಗಿದ್ದವೆಲ್ಲ

ಗುಡಿಸಲು ಸುತ್ತ ನೀರೇರಿತು!

ಪಡ್ಚಾಗುತಿದ್ದೆವು ಕಿಟ್ಟು ನಾವೆಲ್ಲ

ಹಂಡ್ನಾಯಿ ನಮ್ಮ ಕಾಪಾಡಿತು.

ಬಗುಳಿತು, ಬಗುಳಿತು, ಕರೆಯಿತು ನಮ್ಮ

ಏಳಲೆ ಇಲ್ಲವು ನಮ್ಮಪ್ಪ ಅಮ್ಮ.”

೮

“ಏಳ್ಬಾರದಾಗಿತ್ತೆ ಮಂಜಣ್ಣ ನೀನು,

ಹೋಗಲಿ ಆಮೇಲೆ ಹೇಳೆಂ”ದೆವು

“ಆಗಿನ್ನು ಸಣ್ಣವನಾಗಿದ್ದೆ ನಾನು

ನಿನ್ನಷ್ಟು, ಕಿಟ್ಟೂ, ಇರಲಿಲ್ಲವೊ.

ಕೇಳಿರಿ ಹೇಳುವೆ ಮುಂದಾದ ಕತೆಯ

ಆಮೇಲೆ ನಮಗಾದ ಬಲುದೊಡ್ಡ ವೆಥೆಯ.

೯

“ಹಂಡ್ನಾಯಿ ಬಗುಳಿತು ಬಲುಗಟ್ಟಿಯಾಗಿ

ಮಲಗಿದ್ದರೆಲ್ಲರು ಮೈಮರೆತು;

ಕಡೆಗದು ಬಾಗಿಲಹಗ್ಗವ ಹರಿದು

ಒಳನುಗ್ಗಿ ತೆಮ್ಮ ಕರೆಕರೆದು.

ನೆರೆಯೇರಿ ನೀರುಕ್ಕಿ ಮೊರೆಮೊರೆದು ಬಂತು

ನೊರೆಯಾಗಿ ಸುಳಿಸುಳಿದು ಭೋರ್ಗರೆದು ಬಂತು!

೧೦

“ಎಬ್ಬಿಸಿತಪ್ಪನ ಕೂಗಿಕೊಂಡೆದ್ದ

ಅಮ್ಮನ ನನ್ನ ಎಬ್ಬಿಸಿದ;

ಹಂಡ್ನಾಯಿ ಬಾಲವನಾಡಿಸುತಿತ್ತು

ನೆರೆಬಂದು ಹೊಸಲಿಗೇರಿದ್ದಿತು!

“ಮಾಡುವುದೀಗೇನು? ಎಂದು ನಮ್ಮಪ್ಪ!”

“ಅಯ್ಯೊಯ್ಯೊ ಮಂಜೂ!” ಎಂದಳೆನ್ನಮ್ಮ!

೧೧

“ಹಣತೆಯ ದೀಪವ ಹೊತ್ತಿಸಿ ನೋಡೆ

ಹೊಳೆನೀರು ಭೋರೆಂದೇರುತಿತ್ತು;

ಅಪ್ಪ ನೋಡಿದ ಮೇಲೆ ಸುತ್ತಲು ತಿರುಗಿ

ಮುಖವರಳಿತವನಿಗೆ ಸಂತೋಷದಿ;

ಬಿದಿರಟ್ಟವ ಹಿರಿದು ಜೋಡಿಸಿ ಒಟ್ಟಿ

ತೆಪ್ಪವ ಮಾಡಿದನತಿ ಬೇಗ ಕಟ್ಟಿ!

೧೨

“ಏರಿತು! ಏರಿತು! ಭೋರ್ಗರೆವ ನೀರು!

ಮುಂಭಾಗದಾ ಗೋಡೆ ದೊಪ್ಪೆಂದಿತು!

ಮಳೆಯೊಳಗೆ ನೀನುರ್ಗ್ಗಿ ಮೊಳಕಾಲಿಗೇರಿ

ಹಂಡ್ನಾಯಿ ತಲೆಮಾತ್ರ ಮೇಲಿದ್ದಿತು!

ದೇವರೆ ಗತಿಯೆಂದು ತೆಪ್ಪವನೇರಿ

ಹೊರಟೆವು ಭೋರೆಂಬ ನೆರೆಯೊಳು ಹೋರಿ!

೧೩

“ಬಿರುಗಾಳಿ ಬೀಸಿತು; ಥಳಿಸಿತು ಮಿಂಚು,

ಸಿಡಿಲೆರಗಿ ಭೂಮಿ ನಡುಗಿದ್ದಿತು;

ಹಾರುತ್ತ ಬೀಳುತ್ತ ತೇಲಿತು ತೆಪ್ಪ,

ಜೀವಕೈಯಲಿ ಹಿಡಿದು ಕುಳಿತಿದ್ದೆವು;

ತೆಪ್ಪ ಸೇರಿತು ದಡವ ಪುಣ್ಯವಶದಿಂದ

ನಮ್ಮಪ್ಪ “ಅಯ್ಯೆಯ್ಯೊ ಹಂಡೆಲ್ಲಿ?” ಎಂದ!

೧೪

“ತೆಪ್ಪವ ಏರುವ ಗಲಿಬಿಲಿಯಲ್ಲಿ

ಹಂಡನ ಮರೆತು ಬಂದಿದ್ದೆವು!

ಅಪ್ಪನ ಕಣ್ಣಲ್ಲಿ ಸುರಿಯಿತು ನೀರು

ತುಸು ಯೋಚಿಸುತ್ತ ನಿಂತುಕೊಂಡ!

ಅಪ್ಪನ ಮನದಲ್ಲಿ ಏನೇನು ಬಂತೊ?

ತೆಪ್ಪ ಹತ್ತುತ ಗುಡಿಗೆ ಹೊರಟನು ಮತ್ತೆ!

೧೫

“ಅಯ್ಯಯ್ಯೊ ಬೇಡ” ಎಂದಳೆಮ್ಮಮ್ಮ;

ಅಪ್ಪನು ಹೊರಟನು ಇಂತೆನ್ನುತ:

“ನಮ್ಮನು ಕಾಪಾಡಿತಾ ಹಂಡನಾಯಿ

ಬಾಯಿಲ್ಲದದನು ಕೈಬಿಡುವುದೆ?”

ಅಪ್ಪ ಹೋದನು ಬೇಗ; ತೆಪ್ಪ ಮರೆಯಾಯ್ತು

ಅಪ್ಪನಿಗು ನಮಗದೆ ಕಡೆನುಡಿಯಾಯ್ತು!

೧೬

“ಅಪ್ಪ ಹೋದವ ಮತ್ತೆ ಹಿಂತಿರುಗಲಿಲ್ಲ

ಹಂಡ್ನಾಯಿ ಕೂಡ ಬರಲಿಲ್ಲವು!

ಮೂರುದಿನದ ಮೇಲೆ ಹೊಳೆಯಾಚೆಯಲ್ಲಿ

ನಾಯಿಯಪ್ಪಿದ ಹೆಣ ಸಿಕ್ಕಿತಂತೆ!

ನಾಯಿಗಾಗಪ್ಪನು ಜೀವವ ಕೊಟ್ಟ

ಉಪಕಾರಕಾಗಿಯೆ ನಮ್ಮನು ಬಿಟ್ಟ!”

೧೭

ಮುದುಕನ ಮೋರೆಯ ನೋಡುತ್ತ ನಾವು

ಬೆರಗಾಗಿ ಕುಳಿತೆವು ಮಾತಾಡದೆ;

ಎಂದೆಂದಿಗೂ ಅಳದ ಮಂಜಣ್ಣನಂದು

ಕಣ್ಣೀರ ಕರೆದನು ಕತೆ ಹೇಳುತ:

ಅವನಪ್ಪ ಸತ್ತುದಕಾಗತ್ತುದಲ್ಲ!

ಅವನಪ್ಪನಾ ನೀತಿಗಾಗತ್ತನಲ್ಲಿ!

* ಸನ್ ೧೯೨೭ನೆಯ ಇಸವಿ ಅಕ್ಟೋಬರ್ ೩೧ರಂದು "ಅರ್ಥಸಾಧಕ" ಪತ್ರಿಕೆಯಲ್ಲಿ ಪ್ರಕಟವಾದ ಕವನ.

## ಪಂಚಮಂತ್ರ ಮತ್ತು ಸಪ್ತಸೂತ್ರ!

"ಮರ್ತ್ಯಜೀವನದ ತಾಟಸ್ಥ್ಯಮಂ ಕಡೆಕಡೆದು
ಶ್ರದ್ಧೆ ಸಂದೇಹಗಳನಿರದೆ ಹೊಡೆದೆಬ್ಬಿಸುವ,
ಮೇಣ್ ಜನತೆ ಜನತೆಯೊಳ್ ಪಕ್ಷಪಕ್ಷಂಗಳಂ
ಕೆರಳಿಸುವ ಶತಶತ ಮತಂಗಳುಂ ತಾಮಲ್ಲಿ
ರಾರಾಜಿಸಿದುವಗ್ನಿವರ್ಣದ ವೃಕಂಗಳೋಲ್,
ಜೋಲ್ವ ಜಿಹ್ವೆಯೊಳತಿ ಭಯಾನಕಂ – !"

ಅಭಿಷೇಕ ವಿರಾಡ್ ದರ್ಶನಂ – ೧೪೭-೧೫೨
ಶ್ರೀರಾಮಾಯಣದರ್ಶನಂ, ಶ್ರೀ ಸಂಪುಟಂ. ಸಂ. ೧೩.

No man is born to any religion
every man has a religion in his soul.
Let there be as many religions as
there are human beings in the world.

— SWAMY VIVEKANANDA

ಪ್ರತಿಯೊಂದು ಮಗುವೂ ಹುಟ್ಟುತ್ತಲೆ – ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೆ ವಿದ್ಯೆಯ ಕರ್ತವ್ಯವಾಗಬೇಕು.

ಹುಟ್ಟುವಾಗ 'ವಿಶ್ವಮಾನವ'ನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪರಾಗಿ ಅವನನ್ನು 'ಬುದ್ಧ'ನನ್ನಾಗಿ, ಅಂದರೆ ವಿಶ್ವಮಾನವನನ್ನಗಿ, ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು, ಲೋಕ ಉಳಿದು, ಬಾಳಿ ಬದುಕಬೇಕಾದರೆ!

ಮಾನವ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಸದುದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನ್ನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ

ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪುಗುಂಪಾಗಿ ಒಡೆದಿವೆ; ಯುದ್ಧಗಳನ್ನು ಹೊತ್ತಿಸಿವೆ, ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲಕಾರಣವೆಂಬಂತೆ! ವಿಜ್ಞಾನಯುಗದ ಪ್ರಾಯೋಗಿಕ ದೃಷ್ಟಿಗೆ ಇನ್ನುಮೇಲೆ ಮತ ಮೌಢ್ಯ ಒಪ್ಪಿಗೆಯಾಗದು. ವಿನೋಬಾಭಾವೆಯವರು ಹಿಂದೆ ಹೇಳಿದಂತೆ 'ಮತ ಮತ್ತು ರಾಜಕಿಯ ಕಾಲ ಆಗಿಹೋಯಿತು. ಇನ್ನೇನಿದ್ದರೂ ಆಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಾಗಿದೆ.'

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿಯಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೊ ಅಂತಹ ಭಾವನೆ ಅಂತಹ ದೃಷ್ಟಿ ಬರಿಯ ಯಾವುದೊ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಇವು ಮೂಲಮೌಲ್ಯಗಳು. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳಿಸುವತ್ತ ನಡೆದಾವು. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ; ಅದೇನಿದ್ದರೂ ರಾಜಕೀಯದ ಕರ್ಮ. ವ್ಯಕ್ತಿಸ್ವಾತಂತ್ರವನ್ನು ನೀಡಿಯೂ ಸಮಷ್ಟಿಯ ಉದ್ಧಾರದ ದೃಷ್ಟಿ ಇದರದು, ಈ ದೃಷ್ಟಿಗೆ ವ್ಯಕ್ತಿಗಳೆಷ್ಟೊ ಅಷ್ಟೂ ಸಂಖ್ಯೆಯ ಮತಗಳಿರುವುದು ಸಾಧ್ಯ; ಅಷ್ಟೂ ವ್ಯಕ್ತಿಗಳು ಸಮಷ್ಟಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ 'ಧರ್ಶನ'ವನ್ನೆ 'ವಿಶ್ವಮಾನವ ಗೀತೆ' ಸಾರುತ್ತದೆ.

ವಿಶ್ವಮಾನವರಾಗಲು ನಾವು ಸಾಧಿಸಬೇಕಾದ ಮೂಲಭೂತ ಸ್ವರೂಪದ ತತ್ವಪ್ರಣಾಳಿಕೆ:

## ಸಪ್ತಸೂತ್ರ

೧. "ಮನುಷ್ಯಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.

೨. ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೊಲಿಕ್, ಪ್ರಾಟೆಸ್ಟಂಟ್, ಸಿಕ್ ನಿರಂಕಾರಿ ಇತ್ಯಾದಿ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.

೩. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ, ವಿನಾಶಗೊಳಿಸಬೇಕು.

೪. 'ಮತ' ತೊಲಗಿ 'ಆಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು.

೫. ಮತ, 'ಮನುಜಮತ'ವಾಗಬೇಕು; ಪಥ 'ವಿಶ್ವಪಥ'ವಾಗಬೇಕು; ಮನುಷ್ಯ 'ವಿಶ್ವಮಾನವ'ನಾಗಬೆಕು.

೬. ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರು ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳ ಹಚ್ಚುವಂತಾಗಬಾರದು.

೭. ಯಾವ ಒಂದು ಗ್ರಂಥವೂ 'ಏಕೈಕ ಪರಮ ಪೂಜ್ಯ' ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ 'ಧರ್ಶನ'ವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

## ವಿಶ್ವಮಾವನಗೀತೆ — ಅನಿಕೇತನ

ಓ ನನ್ನ ಚೇತನ,
ಆಗು ನೀ ಅನಿಕೇತನ!
ರೂಪರೂಪಗಳನು ದಾಟಿ,
ನಾಮಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!
ನೂರು ಮತದ ಹೊಟ್ಟು ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!
ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು!
ಓ ನನ್ನ ಚೇತನ,
ಆಗು ನೀ ಅನಿಕೇತನ!
ಅನಂತ ತಾನ್ ಅನಂತವಾಗಿ

ಆಗುತಿಹನೆ ನಿತ್ಯಯೋಗಿ;

ಅನಂತ ನೀ ಅನಂತವಾಗು;

ಆಗು, ಆಗು, ಆಗು, ಆಗು,

ಓ ನನ್ನ ಚೇತನ,

ಆಗು ನೀ ಅನಿಕೇತನ!

## MESSAGE OF UNIVERSAL MAN*

Every child, at birth, is the universal man. But, as it grows, we turn it into "a petty man". It should be the function of education to turn it again into the original "universal man".

The child which by birth was the universal man is fettered by us with such constraints as country, language, religion, caste, race and colour. To free it from all these limitations and transform it into "the enlightened soul", that is to say, the universal man, — this should become the first and foremost function of our education, culture, civilization, and what not. All children of the world should become "unhoused" beings, if the world should survive, should continue to live, and advance.

In the course of human evolution great men arose at different periods to fulfil the needs of their times, and (then they) passed into history. The message of some of them assumed the form of a distinct religion, but eventually narrowed down into a more creed. The voice of the great souls, which had sprung from the noble motive of bringing together all men and making them live nobly, degenerated into a mere creed, and thus became a pernicious opiate. There are instances of a religion turning into a mere creed in the course of time and becoming quite worthless in the process, thus giving rise to another — one more new religion. In this manner, numerous creeds arose, broke up humanity into groups and schisms, and have even ignited wars, almost as if they were the root cause of all the troubles and turmoil's of the world! To the experimental outlook of our scientific age, the superstition of religion is no longer acceptable. As Vinobha Bhave said some years ago, "The days of religion and politics have passed. The age of science and spirituality has now to dawn."

The Religion of Humanity, the Universal Path, the Welfare of All, Reconciliation, the Integral Vision — these five mantras should become View of the Future. In other words, what we want henceforth is not this religion or that religion, but the Religion of Humanity; not this path or that path, but the Universal Path; not the wellbeing of this individual or that individual, but the Welfare of All; not turning away and breaking off from one another, but reconciling and uniting in concord and harmony; and, above all, not the partial view of a narrow creed, not the dual outlook of the material and the spiritual, but the Integral Vision of seeing all things with the eye of the Divine.

Ideas which are applicable to all mankind do not relate to a single caste or creed, a single section or country. Since they are of value for all time, there are basic human values, which tend towards uniting all men and enabling them to live in harmony. They give no room to groupism, which, after all, is the sordid game of politics. While giving full scope for individual freedom, this view aims at collective uplift. On this

view, it is possible to have as many religious as there are individuals; and it is possible for all the individuals to contribute towards the development of the whole community. It is this “vision” which is proclaimed by the following poem. “The Unhoused Consciousness.”

The Charter of Fundamental Principles, to be practised in order to become universal Men.

* * *

1. We have to accept unconditionally that “All mankind is, verily, one (community).”

2. Our attempt should be not to reform the caste system but to wipe it out completely. That is to say, distinctions like Brahmans, Kshatriyas Vaisyas and Sudras, or the Depressed classes, or Shia and Sunni, or Catholic and Protestant, or Sikh and Nirankari, should be eradicated altogether.

3. The caste systems that exist in all countries and all religious should be totally denounced and completely destroyed.

4. ‘Religion’ should go, and ‘spirituality’ alone, being a scientific principle, must be recognized.

5. “Religion” should become “the Religion of Humanity”; the Path should become the “Universal Path”; and man should become the “Universal Man”.

6. Religion should not become a matter for creating schisms. No one should belong to any particular religion, on the contrary, everyone should belong to “his own” religion — the religion that he has personally discovered. This will mean that there will be as many religions as there are individuals in the world; no one will seek to embrace another’s religion, form his own group and create factions.

7. No single book should become the “only one” and the “most sacred” scripture. Everyone should, on the contrary study and assimilate all the books he can and should freely decide what to accept, and build for himself his own ‘philosophy’.

---

* Rendered into English by Dr. Prabhushnakar and Friends.

# THE UNHOUSED CONSCIOUSNESS

(The song of the Universal Man)

Be unhoused, O my soul!
Only the Infinite is your goal.

Leave those myriad forms behind.
Leave the million names that bind.
A flash will pierce your heart and mind
And unhouse you, O my soul!

Winnow the chaff of a hundred creeds.
Beyond these systems, hollows as reeds,
Turn unhorizoned where Truth leads,
To be unhoused, O my soul!

Stop not on the unending way.
Never build a house of clay.
The quest is endless. Night and day,
There can be no end to your play
When you are unhouse, O my soul!

The infinite's Yoga knows no end.
Endless the quest you apprehend.
You'll grow infinite and ascend
When you are unhoused, O my soul!

— *Translated by* Prof. V. K. GOKAKA